ದಿನಾಂಕ:17ನೇ ಆಗಸ್ಟ್, 2013

**ಪತ್ರಿಕಾ ವರದಿ**

**"ವಿಶ್ವ ಭ್ರಾತೃತ್ವ ರಕ್ಷಾ ಬಂಧನ ಮಹೋತ್ಸವ - 2013"**

**"ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್" ನಲ್ಲಿ ದಾಖಲೆಯಾದ ವಿಶ್ವದ ಅತಿ ದೊಡ್ಡ ರಾಖಿ**

ಸನ್ಮಾನ್ಯರೇ,

ಪ್ರಜಾಪಿತಾ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ **ರಕ್ಷಾಬಂಧನ ಹಬ್ಬದ** ಪ್ರಯುಕ್ತ ಬೆಂಗಳೂರು - 4, ಬುಲ್ ಟೆಂಪಲ್ ರಸ್ತೆಯಲ್ಲಿರುವ ಉದಯಭಾನು ಆಟದ ಮೈದಾನದಲ್ಲಿ **"ವಿಶ್ವ ಭ್ರಾತೃತ್ವ ರಕ್ಷಾ ಬಂಧನ ಮಹೋತ್ಸವ-2013"** ಎಂಬ ಹೆಸರಿನಲ್ಲಿ ದಿನಾಂಕ: 17-08-2013 ರಿಂದ 21-08-2013 ರವರೆಗೆ ಒಂದು ಬೃಹತ್ ಕಾರ್ಯಕ್ರಮವನ್ನು ಆಯೋಜಿಸಿಸಲಾಗಿದೆ.

ಈ ಮಹೋತ್ಸವದ ಅಂಗವಾಗಿ **"ವಿಶ್ವದ ಅತಿ ದೊಡ್ಡ** ಅಂದರೆ **40 ಅಡಿ ಡಯಾ, 400 ಅಡಿ ಅಗಲದ ರಾಖಿ"** ಯನ್ನು ನಿರ್ಮಿಸಿ ಅದರ ಮುಖಾಂತರ ಸಾಮಾಜಿಕ ಪಿಡುಗುಗಳಾದ ಕುಡಿತ, ತಂಬಾಕು ಸೇವನೆ, ವ್ಯಸನಗಳ ಬಗ್ಗೆ, ಮಹಿಳೆಯರ ಮೇಲಿನ ಶೋಷಣೆ ಬಗ್ಗೆ, ಮತ್ತು ಜಾಗತಿಕ ಸಮಸ್ಯೆಗಳಾದ ಭೂಮಿಯಲ್ಲಿ ಏರುತ್ತಿರುವ ತಾಪಮಾನದ ಬಗ್ಗೆ, ಅರಣ್ಯ ನಾಶ, ವಾತಾವರಣವು ಕಲುಷಿತ ಗೊಳ್ಳುತ್ತಿರುವ ಬಗ್ಗೆ ಹಾಗೂ ಬೆಂಗಳೂರು ನಗರವನ್ನು ಕಸ ವಿಲೇವಾರಿಯ ಸಮಸ್ಯೆಯಿಂದ ಮುಕ್ತ ಮಾಡುವಲ್ಲಿ ಬಿ.ಬಿ.ಎಂ.ಪಿ. ಯವರು ರೂಪಿಸಿರುವ ಯೋಜನೆಗೆ ಸರ್ವರೂ ಕೈಜೋಡಿಸಲು ಜಾಗೃತಿಯನ್ನು ತರಲು ಪ್ರಯತ್ನಿಸಲಾಗುತ್ತಿದೆ.

ಈ ಕಾರ್ಯಕ್ರಮದ **ಉದ್ಘಾಟನಾ ಸಮಾರಂಭವು ದಿನಾಂಕ:17-08-2013 ನೇ ಶನಿವಾರದಂದು ಬೆಳಿಗ್ಗೆ 11.00 ಗಂಟೆಗೆ ನೆರವೇರಿತು.** ಇದನ್ನು ಉದ್ಘಾಟಿಸಲು ಆದಿ ಚುಂಚನಗಿರಿ ಮಹಾಸಂಸ್ಥಾನ ಪೀಠಾಧ್ಯಕ್ಷರಾದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಶ್ರೀ ಆರ್.ವಿ. ದೇವರಾಜ್, ಶಾಸಕರು, ಚಿಕ್ಕಪೇಟೆ ಕ್ಷೇತ್ರ, ಶ್ರೀ. ಸದಾಶಿವ, ನಗರಸಭೆ ಸದಸ್ಯರು, ಸುಂಕೇನಹಳ್ಳಿ ವಾರ್ಡ್, ಬಿ.ಬಿ.ಎಂ.ಪಿ., ಶ್ರೀ. ಎಂ.ಬಿ.ಜಯರಾಮ್, ಛೇರ್‌ಮನ್, ಪಬ್ಲಿಕ್ ರಿಲೇಷನ್ ಕೌನ್ಸಿಲ್ ಆಫ್ ಇಂಡಿಯಾ, ಬೆಂಗಳೂರು, ಶ್ರೀ. ವಿ.ವಿ.ಆರ್. ಮೂರ್ತಿ, ಮಾರ್ಕೆಟಿಂಗ್ ಮ್ಯಾನೇಜರ್, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್, ಗುರಗಾವ್, ಹರಿಯಾಣ, ಬ್ರಹ್ಮಾಕುಮಾರೀಸ್ ಸಂಸ್ಥೆಯ ರಾಜಯೋಗಿನಿ. ಬಿ.ಕೆ. ಲಕ್ಷ್ಮಿ ಅಕ್ಕನವರು, ಉಪ-ವಲಯ ಸಂಚಾಲಕರು, ಮೈಸೂರು ವಲಯ, ರಾಜಯೋಗಿನಿ. ಬಿ.ಕೆ. ಸರೋಜ ಅಕ್ಕನವರು, ಉಪ-ವಲಯ ಸಹ ಸಂಚಾಲಕರು, ಕುಮಾರಪಾರ್ಕ್, ಬೆಂಗಳೂರು, ಬಿ.ಕೆ. ಲೀಲಾಜಿ, ಹಿರಿಯ ರಾಜಯೋಗ ಶಿಕ್ಷಕಿ, ತಿರುಪತಿ ಬಿ.ಕೆ. ಗೀತಾಜಿ, ಹಿರಿಯ ರಾಜಯೋಗ ಶಿಕ್ಷಕಿ, ಕಡಪ, ಇನ್ನೂ ಮುಂತಾದ ಗಣ್ಯರು ಆಗಮಿಸಿದ್ದರು.

ಈ ಮೇಲ್ಕಂಡ ಬೃಹತ್ ರಾಖಿಯು **"ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್" ನಲ್ಲಿ ದಾಖಲೆಯಾಗಿ** ಇದರ ಮಾರ್ಕೆಟಿಂಗ್ ಮ್ಯಾನೇಜರ್‌ರವರಾದ ಶ್ರೀ. ವಿ.ವಿ.ಆರ್. ಮೂರ್ತಿರವರು ಸಮಾರಂಭದ ವೇದಿಕೆಯಲ್ಲೇ ಇದನ್ನು ಆಯೋಜಿಸಿದ **ಬ್ರಹ್ಮಾಕುಮಾರೀಸ್ ಸಂಸ್ಥೆಯ ಬೆಂಗಳೂರು, ಚಾಮರಾಜಪೇಟೆ ಉಪ-ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಪದ್ಮಾಜೀ** ರವರಿಗೆ ಪ್ರಮಾಣಪತ್ರವನ್ನು ನೀಡಿದರು.

Contd.......2

ಈ ಕಾರ್ಯಕ್ರಮಕ್ಕೆ ಆಗಮಿಸಿದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳಿಗೂ, ಶ್ರೀ. ಆರ್.ವಿ. ದೇವರಾಜ್‌ರವರಿಗೂ ಹಾಗೂ ಇತರ ಎಲ್ಲಾ ಅತಿಥಿ ಮಹೋದಯರಿಗೂ ಮತ್ತು ಸಮಾರಂಭಕ್ಕೆ ಆಗಮಿಸಿದಂತಹ ಸರ್ವರಿಗೂ ಪವಿತ್ರ ರಾಖಿಯ ಶ್ರೀರಕ್ಷೆಯನ್ನು ಕಟ್ಟಲಾಯಿತು. ಹಾಗೂ ವಿಶ್ವ ಭ್ರಾತೃತ್ವದ ಭಾವನೆಯನ್ನು ದೃಢಗೊಳಿಸುವ ಸಲುವಾಗಿ ಎಲ್ಲರಿಂದಲೂ **"ನಾವು ಪರಸ್ಪರ ಸ್ನೇಹ, ವಿಶ್ವಾಸ, ಆತ್ಮೀಯತೆಯಿಂದ ಇದ್ದು ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತೇವೆ" ಎಂಬುದಾಗಿ ಪ್ರತಿಜ್ಞೆಯನ್ನು ಸಹ ಮಾಡಿಸಲಾಯಿತು.**

ಈ ಕಾರ್ಯಕ್ರಮವನ್ನು ಆಯೋಜಿಸಿದ ರಾಜಯೋಗಿನಿ ಬ್ರಹ್ಮಾಕುಮಾರಿ ಪದ್ಮಾಜೀ ರವರು ರಾಖೀ ಹಬ್ಬದ ಮಹತ್ವವನ್ನು ತಿಳಿಸಿ, ತಮ್ಮ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಳ್ಳಲು ತಮ್ಮಲ್ಲಿರುವ ಅವಗುಣಗಳನ್ನು, ದುಶ್ಚಟಗಳನ್ನು ತ್ಯಾಗ ಮಾಡಿರಿ ಎಂದು ಎಲ್ಲರನ್ನೂ ಸೆರಗೊಡ್ಡಿ ಕೇಳಿಕೊಂಡರು.

ಈ ಕಾರ್ಯಕ್ರಮದಲ್ಲಿ ಶಿರಸಿಯಿಂದ ಆಗಮಿಸಿದ್ದ ಬ್ರಹ್ಮಾಕುಮಾರಿ ವೀಣಾ ಅಕ್ಕನವರು ಪ್ರಸ್ತಾವಿಕ ಭಾಷಣವನ್ನು ಮಾಡಿದರು, ಹಾಗೂ ಗೌರಿಬಿದನೂರಿನಿಂದ ಆಗಮಿಸಿದ್ದ ಬ್ರಹ್ಮಾಕುಮಾರಿ ಪದ್ಮ ಅಕ್ಕನವರು ವಂದನಾರ್ಪಣೆಯನ್ನು ಮಾಡಿದರು, ಈ ಕಾರ್ಯಕ್ರಮದಲ್ಲಿ ಡಿವೈನ್ ಏಂಜಲ್ಸ್ ಗ್ರೂಪ್, ಬೆಳಗಾವಿ ಹಾಗೂ ಶ್ರೀ. ಜಿ.ವಿ. ರಾಜು ಮತ್ತು ತಂಡದವರು, ಬೆಂಗಳೂರು, ರವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಈ "ವಿಶ್ವ ಭ್ರಾತೃತ್ವ ರಕ್ಷಾ ಬಂಧನ ಮಹೋತ್ಸವವು **ಇನ್ನೂ ನಾಲ್ಕು ದಿನಗಳವರೆಗೆ** ಅಂದರೆ ದಿನಾಂಕ:21-08-2013 ರವರೆಗೆ ಇದ್ದು ಇದರಲ್ಲಿ

1. ಎದ್ದೇಳಿ! ಕುಂಭಕರ್ಣ : (21 ಅಡಿ ಅಗಲದ ಧ್ವನಿ ಹಾಗೂ ಬೆಳಕಿನಿಂದ ಕೂಡಿರುವ ಕುಂಭಕರ್ಣನ ಷೋ
2. ಪ್ರೊಜೆಕ್ಟರ್ ಷೋ
3. ಆಧ್ಯಾತ್ಮಿಕತೆ, ಧ್ಯಾನ ಹಾಗೂ ಸಾಮಾಜಿಕ ಸಂದೇಶದ ಚಿತ್ರಪ್ರದರ್ಶನ
4. ಧ್ಯಾನ ಕುಟೀರ
5. ಅಂತರ ಶಾಲಾ ಮಕ್ಕಳಿಗೆ ಹಾಡುಗಾರಿಕೆ, ಚಿತ್ರಕಲೆ ಹಾಗೂ ನೃತ್ಯದ ಸ್ಪರ್ಧೆಗಳು ಹಾಗೂ ಹಿರಿಯ ನಾಗರೀಕರಿಗೂ ಹಾಗೂ ವಿಕಲ ಚೇತನರಿಗೂ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿರುತ್ತದೆ.
6. ವಿಶ್ವ ಭ್ರಾತೃತ್ವ ಹಾಗೂ ವಿಶ್ವ ಶಾಂತಿಯ ಸಲುವಾಗಿ ಸುಮಾರು 500 ಕ್ಕೂ ಹೆಚ್ಚು ಜನರಿಂದ ಸಾಮೂಹಿಕ ರಾಜಯೋಗ ಧ್ಯಾನ ಕಾರ್ಯಕ್ರಮ.